**OS 50/2022**

**ಪಿಡಬ್ಲ್ಯೂ: 1**

**ದಿ: 01-07-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ. ಕೆ ಎನ್ ವಿ ಪ್ರತಿವಾದಿಗಳ ಪರ ವಕೀಲರಿಂದ:**

ನನ್ನ ತಂದೆ ಜೀವಂತ ಇದ್ದಾಗ ನನ್ನ ವಿವಾಹ 1974 ರಲ್ಲಿ ಆಗಿದೆ ಎಂದರೆ ಸರಿ. ನನ್ನ ಗಂಡನ ಊರು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ ರಾಮಗೆರೆ ಗ್ರಾಮ. ನನ್ನ ಗಂಡನಿಗೆ ರಾಮಗೆರೆ ಗ್ರಾಮದಲ್ಲಿ ಜಮೀನು ಮತ್ತು ಮನೆ ಆಸ್ತಿ ಇದೆ. ನನ್ನ ವಿವಾಹವನ್ನು ನನ್ನ ತಂದೆ ತಾಯಿ ಚೆನ್ನಾಗಿ ಅನುಕೂಲ ಮಾಡಿಕೊಟ್ಟು ಮಾಡಿದ್ದರು ಎಂದರೆ ಸರಿ. ನನ್ನ ವಿವಾಹದ ಕಾಲಕ್ಕೆ ನನ್ನ ತಂದೆ ತಾಯಿ ನನಗೆ ಎಂದು ಬೆಳ್ಳಿ, ಬಂಗಾರ ಮತ್ತು ಹಣ ನೀಡಿದ್ದರು ಎಂದರೆ ಸರಿಯಲ್ಲ. ವಿವಾಹದ ಕಾಲಕ್ಕೆ ನನ್ನ ತಂದೆ ತಾಯಿ ನನಗೆ ಬೆಳ್ಳಿ, ಬಂಗಾರ ಮತ್ತು ನಗದು ನೀಡಿ ತವರು ಮನೆ ಕಡೆ ಯಾವುದೇ ಹಕ್ಕು ಇಲ್ಲ ಎಂದು ಹೇಳಿ ನನ್ನನ್ನು ಗಂಡನ ಮನೆಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆ ಜೀವಂತ ಇದ್ದಾಗ, ಮರಣ ಹೊಂದಿದ ನಂತರ ಮತ್ತು ಈ ಪ್ರಕರಣ ದಾಖಲಿಸುವವರೆಗೆ ನನಗೆ ದಾವ ಆಸ್ತಿಯಲ್ಲಿ ಯಾವುದೇ ಭಾಗ ಇಲ್ಲ ಎಂದು ಗೊತ್ತಿದ್ದ ಕಾರಣ ನಾನು ಪ್ರಕರಣ ದಾಖಲಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ವಿವಾಹ ಆದಾಗಿನಿಂದ ನನ್ನ ತಂದೆ ಮತ್ತು ನನ್ನ ಅಣ್ಣ ದಾವ ಸ್ವತ್ತಿನಿಂದ ನನ್ನನ್ನು ಹೊರತುಪಡಿಸಿ ಅವರೇ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ವಿವಾಹದ ನಂತರ ನನ್ನ ತಂದೆ ಮತ್ತು ನನ್ನ ಅಣ್ಣ ದಾವ ಆಸ್ತಿಗಳನ್ನು ಅವರೇ ಮಾಲೀಕತ್ವದ ಸ್ವಾಧೀನ ಹೊಂದಿದ್ದಾರೆಂದರೆ ಸಾಕ್ಷಿ ದಾವ ಆಸ್ತಿಗಳ ಸ್ವಾಧೀನ ಅವರೇ ಹೊಂದಿದ್ದರು ಸಹ ಭಾಗ ನೀಡುತ್ತೇನೆಂದು ಹೇಳಿದ್ದರು ಎಂದು ನುಡಿಯುತ್ತಾರೆ.

ರಾಮಗೆರೆಗೂ ಮತ್ತು ನನ್ನ ತವರು ಮನೆಗೂ ಸುಮಾರು 30-40 ಕಿ.ಮೀ. ಅಂತರವಿದೆ ಇದೆ ಎಂದರೆ ಇರಬಹುದು. 4 ನೇ ಪ್ರತಿವಾದಿಯ

ವಿವಾಹ 1992 ರಲ್ಲಿ ಆಗಿದೆ. 2 ಮತ್ತು 3 ನೇ ಪ್ರತಿವಾದಿಗಳ ವಿವಾಹ 2002 ರಲ್ಲಿ ಆಗಿದೆ ಎಂದರೆ ಸರಿ. ನಾನು 2 ಮತ್ತು 3 ನೇ ಪ್ರತಿವಾದಿಗಳ ವಿವಾಹಕ್ಕೆ ಹೋಗಿರಲಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿಯ ವಿವಾಹಕ್ಕೆ ಹೋಗಿದ್ದೆ.

**(ವಿನಂತಿಯ ಮೇರೆಗೆ ಮುಂದಿನ ಪಾಟೀ ಸವಾಲನ್ನು ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

<u>ಪಿಡಬ್ಲ್ಯೂ: 1</u>

<u>ಪಿಡಬ್ಲ್ಯೂ: 1</u>